ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಪಾವಗಡ ನ್ಯಾಯಾಲಯ

**ಓ.ಎಸ್. ಸಂಖ್ಯೆ147/2018**

**ದಿನಾಂಕ 21.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಪಿ.ಡಬ್ಲ್ಯೂ-1

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ.ಪಿ.ಎಸ್.ಎಂ ವಕೀಲರಿಂದಃ

2. ದಿ.25.07.2016 ರಂದು 2 ನೇ ಪ್ರತಿವಾದಿಗೆ ಅವರ ತಂದೆ ದಾನಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸುಳ್ಳು. ದಾವಾ ಸ್ವತ್ತು ಮೊದಲು ತಿಮ್ಮಣ್ಣನಿಗೆ ಸೇರಿತ್ತು ಎಂದರೆ ಸಾಕ್ಷಿ ದಾವಾ ಸ್ವತ್ತು ಸಣ್ಣ ಸಿದ್ದಪ್ಪನಿಗೆ ಸೇರಿದ ಸ್ವತ್ತಾಗಿದೆ. ಈಗಲೂ ತಿಮ್ಮಣ್ಣನ ಹೆಸರಿನಲ್ಲಿ ಖಾತೆ ಕಂದಾಯ ಇದ್ದು, ಅದನ್ನು ಅವರೆ ಪಾವತಿ ಮಾಡಿದ್ದಾರೆ ಎಂದರೆ ಸಣ್ಣ ಸಿದ್ದಪ್ಪನ ಹೆಸರಿನಲ್ಲಿ ಇದೆ. ದಾವಾ ಸ್ವತ್ತಿನಲ್ಲಿ ತಿಮ್ಮಣ್ಣ ಮನೆ ಕಟ್ಟಿದ್ದಾರೆ ಎಂದರೆ ಸಾಕ್ಷಿ ದಾವಾ ಸ್ವತ್ತಿನಲ್ಲಿ ಹೆಂಚಿನ ಮನೆ ಇತ್ತು, ಅದು ನಮಗೆ ಸೇರಿದ್ದು ಆಗಿತ್ತು. ಅದನ್ನು ಪ್ರತಿವಾದಿಗಳು ಬೀಳಿಸಿದ್ದಾರೆ. ತಿಮ್ಮಣ್ಣ ರವರು ಹಳೆ ಮನೆಯನ್ನು ಕಿತ್ತು ಹೊಸ ಮನೆಯನ್ನು ಕಟ್ಟಿದ್ದಾರೆ ಎಂದರೆ ಮನೆ ಕಟ್ಟುವಾಗ ನಾವು ತಕರಾರು ತೆಗೆದಿದ್ದೇವೆ. 2 ನೇ ಪ್ರತಿವಾದಿಯ ತಂದೆ ತಿಮ್ಮಣ್ಣ ದಿ.25.07.2016 ರಲ್ಲಿ 2 ನೇ ಪ್ರತಿವಾದಿಯ ಹೆಸರಿಗೆ ದಾನಪತ್ರದ ಮೂಲಕ ದಾವಾ ಸ್ವತ್ತನ್ನು ಬಿಟ್ಟು ಕೊಟ್ಟಿದ್ದಾರೆ ಎಂದರೆ ಸುಳ್ಳು. ದಾನಪತ್ರದ ಆಧಾರದ ಮೇಲೆ 2 ನೇ ಪ್ರತಿವಾದಿ ಹೆಸರಿಗೆ ಖಾತೆ ಕಂದಾಯ ದಾಖಲೆಗಳು ಬಂದಿವೆ ಎಂದರೆ ಸಾಕ್ಷಿ ನನ್ನ ಮಾವನ ಹೆಸರಿನಲ್ಲಿ ಇವೆ ಎಂದು ನುಡಿಯುತ್ತಾರೆ.

3. ಸಾಕ್ಷಿಗೆ ಒಂದು ಡಿಮಾಂಡ್ ರಿಜಿಸ್ಟರ್ ನ್ನು ತೋರಿಸಲಾಯಿತು. ಅದರಲ್ಲಿ 1 ನೇ ಪ್ರತಿವಾದಿ ಹೆಸರು ಇದೆ ಎಂದರೆ ಸಾಕ್ಷಿ ಇದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಮತ್ತೊಂದು ಡಿಮಾಂಡ್ ರಿಜಿಸ್ಟರ್ ನ್ನು ತೋರಿಸಲಾಯಿತು. ಅದರಲ್ಲಿ 2 ನೇ ಪ್ರತಿವಾದಿ ಹೆಸರಿಗೆ ದಾನ ಪತ್ರದ ಮೂಲಕ ಖಾತೆ ಕಂದಾಯ ಮಾಡಿದ ರೀತಿ ಇದೆ ಎಂದರೆ ಪಂಚಾಯ್ತಿಯಲ್ಲಿ

ಮಾಡಿಸಿಕೊಂಡಿದ್ದಾರೆ. 1 ನೇ ಪ್ರತಿವಾದಿ ಹೆಸರಿಗೆ ಆದ ಖಾತೆ ಕಂದಾಯವನ್ನು ಮತ್ತು 2 ನೇ ಪ್ರತಿವಾದಿ ಹೆಸರಿಗೆ ಆದ ಖಾತೆ ಕಂದಾಯವನ್ನು ಪ್ರಶ್ನೆ ಮಾಡಿ ಅಪೀಲು ಸಲ್ಲಿಸಿದ್ದೀರಾ ಎಂದರೆ ಇಲ್ಲ. ವಾದಿಯ ತಾಯಿ ಸಾವಿತ್ರಮ್ಮ ನನ್ನ ಮಾವ ಸಣ್ಣ ಸಿದ್ದಪ್ಪನ ತಂಗಿ ಆಗಬೇಕು ಎಂದರೆ ಸರಿ. ಸಾವಿತ್ರಮ್ಮನಿಗೂ ಸಣ್ಣ ಸಿದ್ದಪ್ಪನಿಗೂ ಮನಸ್ತಾಪ ಬಹಳ ವರ್ಷಗಳಿಂದ ಇದೆ ಎಂದರೆ ಸರಿ.

<u>ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಆಲಿಸಿ ಮುಂದೂಡಲಾಯಿತು.</u>

(ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ . ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್. ಸಿ.,
ಪಾವಗಡ